**w ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 322/2018**

**ಚಾ.ಸಾ – 7**

**ಪ್ರಾ.ಸಾ – 2**

**ಸಾಕ್ಷಿಗೆ ದಿನಾಂಕ 14–02–2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ರವಿ |
| ತಂದೆಯ ಹೆಸರು | ಃ | ರಾಮಗೊಂಡ ಆಲಗೂರ |
| ವಯಸ್ಸು | ಃ | 20 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಮದರಿ |

**2 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು ಆತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು 2 ನೇ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.**

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1 ನೇ ಆರೋಪಿ ಗೊತ್ತು. 2 ನೇ ಆರೋಪಿ ಗೊತ್ತಿಲ್ಲ. ಚಾಸಾ 1, 6, 8 ರಿಂದ 21 ಗೊತ್ತು. ಪ್ರಕರಣದ ವಿಚಾರಗಳು ಗೊತ್ತಿಲ್ಲ. 7 ವರ್ಷಗಳ ಹಿಂದೆ ಮುದಬಾಳ ತಿರುವಿನ ಬಳಿ ಅಪಘಾತವಾಗಿರುತ್ತದೆ. ಅಪಘಾತದ ದಿನದಂದು ನಾನು ಮದರಿ ಗ್ರಾಮದಿಂದ ಶಹಾಪೂರಕ್ಕೆ ಕ್ರೂಸರ್ ವಾಹನದಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ನಾನು ಕ್ರೂಸರ್ ವಾಹನದಲ್ಲಿದ್ದೆ. ಅಪಘಾತಪಡಿಸಿದ ವಾಹನದ ನಂಬರ್ ಗೊತ್ತಿಲ್ಲ. ಅಪಘಾತವು ಲಾರಿ ಮತ್ತು ಕ್ರೂಸರ್ ವಾಹನಗಳ ನಡುವೆ ಆಗಿರುತ್ತದೆ. ಸದರಿ ಲಾರಿ ಮತ್ತು ಕ್ರೂಸರ್ ವಾಹನ ನಂಬರ್ ಗೊತ್ತಿಲ್ಲ ಹಾಗೂ ಸದರಿ ಲಾರಿ ಮತ್ತು ಕ್ರೂಸರ್ ವಾಹನಗಳನ್ನು ಯಾರು ಚಾಲನೆ ಮಾಡುತ್ತಿದ್ದರೆಂದು ಗೊತ್ತಿಲ್ಲ. ಅಪಘಾತವು ಯಾರ

ತಪ್ಪಿನಿಂದ ಹಾಗೂ ಯಾರಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ಎರಡೂ ಮೊಣಕಾಲಿನ ಕಳೆಗೆ ಪೆಟ್ಟಾಗಿತ್ತು. ಅಪಘಾತದ ವಿಚಾರವಾಗಿ ಪೋಲೀಸರಿಗೆ ಹೇಳಿಕೆ ನೀಡಿಲ್ಲ. ಅಪಘಾತವು ಹೇಗೆ ಮತ್ತು ಯಾರಿಂದ ಆಗಿರುತ್ತದೆ ಎಂದು ಪೊಲೀಸರು ನನಗೆ ತಿಳಿಸಿಲ್ಲ. ಪೊಲೀಸರು ಲಾರಿ ಹಾಗೂ ಕ್ರೂಸ್ ವಾಹನಗಳ ಚಾಲಕರನ್ನು ತೋರಿಸಿಲ್ಲ. ಪೊಲೀಸರಿಗೆ ನಾನು ಮರುಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಕ್ರೂಸರ್ ವಾಹನವನ್ನು ನೋಡಿ ಗುರುತಿಸಿದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೆರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಲಾರಿ ವಾಹನವನ್ನು ನೋಡಿ ಗುರುತಿಸಿಲ್ಲ

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

ದಿನಾಂಕ 13-03-2015 ರಂದು ನಾನು ಮತ್ತು ನನ್ನ ತಾಯಿ ಗೌರಮ್ಮ, ಅಣ್ಣ ಮಲ್ಲಪ್ಪ, ಅಳಿಯ ಪ್ರಭು ಹಾಗೂ ನಮ್ಮ ಗ್ರಾಮದ ಮಲ್ಲಣ್ಣ ತಳವಾರ , ಮಲ್ಲಣ್ಣ ನಾಟೇಕಾರ್, ಮಲ್ಲೇಶಿ ನಾಟೇಕಾರ್ , ಜಾನಪ್ಪ ಸುಬೇದಾರ, ಖಂಡಪ್ಪ ಖಡಬಾಳ, ಶರಣಪ್ಪ ಹಲಗಡ್ಲ, ಶರಣಪ್ಪ ಸುಬೇದಾರ ಎಲ್ಲರೂ ಕೂಡಿಕೊಂಡು ಕೆಎ-32 ಎಂ.-6243 ರಲ್ಲಿ ಸಗರ ಗ್ರಾಮಕ್ಕೆ ಹೋಗುತ್ತಿದ್ದೆವು ಎಂದರೆ ನಿಜ.

ಸದರಿ ಕ್ರೂಸರ್ ವಾಹನವನು 1 ನೇ ಆರೋಪಿ ಶಿವುಕುಮಾರ ತಂದೆ ಶಂಕರ್ ವಿಶ್ವಕರ್ಮ ನಡೆಸುತ್ತಿದ್ದ ಎಂದರೆ ನಿಜ. ಅದೇ ದಿನ ಸಂಜೆ 06-30 ಗಂಟೆ ಸಮಯದಲ್ಲಿ ಮುದಬಾಳ ಕೆ ಗ್ರಾಮದ ತಿರುವು ಹತ್ತಿರ 2 ನೇ ಆರೋಪಿ ತನ್ನ ಲಾರಿ ನಂ.MH 38 D-0514 ನ್ನು ಅತಿವೇಗ, ನಿರ್ಲಕ್ಷತನ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಒಮ್ಮೆಲೆ ಬ್ರೇಕ್ ಅಳವಡಿಸಿದ ಕಾರಣ ಹಾಗೂ ನಮ್ಮ ಕ್ರೂಸರ್ ವಾಹನದ ಚಾಲಕ ಕೂಡ ವಾಹನವನ್ನು ಅತಿವೇಗ, ನಿರ್ಲಕ್ಷತನ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ ಕಾರಣ ದರಿ ಕ್ರೂಸರ್ ವಾಹನ ಲಾರಿಯ ಹಿಂಬದಿಗೆ ಹೋಗಿ ಡಿಕ್ಕಿಯಾಗುವಂತೆ ಮಾಡಿರುತ್ತಾರೆಂದೆ ನಿಜ. ಸದರಿ ಕ್ರೂಸರಿನಲ್ಲಿ ನನ್ನೊಂದಿಗೆ ಪ್ರಯಾಣಿಸುತ್ತಿದ್ದ ಮಲ್ಲಣ್ಣ ತಳವಾರ್ ರವರಿಗೆ ಅಪಘಾತದಲ್ಲಿ ತೀವ್ರಸ್ವರೂಪದ ಗಾಯಗಳಾಗಿ ಆತ ಮೃತಪಟ್ಟಿರುತ್ತಾನೆಂದರೆ ನಿಜ. ಸದರಿ ಅಪಘಾತದಲ್ಲಿ ಚಾಸಾ-10 ರಿಂದ 17 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆಂದರೆ ನಿಜ. ಸದರಿ ಅಪಘಾತದಲ್ಲಿ ಚಾಸಾ-6 ರಿಂದ 9 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆಂದರೆ

ನಿಜ. ಅಪಘಾತವು ಎರಡೂ ವಾಹನಗಳ ಚಾಲಕರ ತಪ್ಪಿನಿಂದ ಆಗಿರುತ್ತವೆಂದರೆ ನಿಜ. ಲಾರಿ ಚಾಲಕ ಶೇಖ್ ಮೆಹತಾಬರರವರನ್ನು ಪೊಲೀಸರು ನನಗೆ ತೋರಿಸಿರುತ್ತಾರೆಂದರೆ ನಿಜ. ನಾನು ಅಪಘಾತದ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ಹಾಗೂ 2 ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಮರು ಹೇಳಿಕೆ ನೀಡಿರುತ್ತೇನೆಂದರೆ ನಿಜ.

ಪಾಟೀ ಸವಾಲುಃ ಶ್ರೀ ಎಸ್.ಬಿ.ವೈ. ಆರೋಪಿ ಪರ ವಕೀಲರಿಂದಃ

ನನ್ನ ಹೇಳಿಕೆಗಳಲ್ಲಿ ಬರೆದಂತಹ ವಿಚಾರಗಳು ಗೊತ್ತಿಲ್ಲ. ಅಪಘಾತವು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ಎಲ್ಲಿ , ಯಾರಿಂದ ಹಾಗೂ ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿಯನ್ನು ನಾನು ಎಲ್ಲಿಯೂ ನೋಡಿಲ್ಲ. ಅಪಘಾತವಾದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. 2 ನೇ ಆರೋಪಿ ಲಾರಿಯನ್ನು ಅತಿವೇಗ, ಅಜಾಗರೂಕತೆಯಿಂದ, ನಿರ್ಲಕ್ಷತನದಿಂದ ಚಾಲನೆ ಮಾಡಿ ಒಮ್ಮೆಲೆ ಬ್ರೇಕ್ ಹಾಕಿದ್ದನ್ನು ನೋಡಿಲ್ಲ. ಅಪಘಾತವನ್ನು ನಾನು ನೋಡಿಲ್ಲ. 2 ನೇ ಆರೋಪಿಗೂ ಹಾಗೂ ಈ ಪ್ರಕರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಏನೂ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹಿರಿಯ ಪ್ರ.ದ.ನ್ಯಾ ದಂಡಾಧಿಕಾರಿಗಳು
ಜೇವರಗಿ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 322/2018**

**ಚಾ.ಸಾ – 9**

**ಫಾ.ಸಾ – 3**

**ಸಾಕ್ಷಿಗೆ ದಿನಾಂಕ 14–02–2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಜಾನಪ್ಪ ಸುಬೇದಾರ |
| ತಂದೆಯ ಹೆಸರು | ಃ | ಸಂಗಣ್ಣ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಮದರಿ |

**2 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು ಆತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು 2 ನೇ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.**

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1 ನೇ ಆರೋಪಿ ಗೊತ್ತಿಲ್ಲ. 2 ನೇ ಆರೋಪಿ ಗೊತ್ತಿಲ್ಲ. ಚಾಸಾ 1, 6 ರಿಂದ 8, 10 ರಿಂದ 20 ಗೊತ್ತಿಲ್ಲ. ಪ್ರಕರಣದ ವಿಚಾರಗಳು ಗೊತ್ತಿಲ್ಲ. ಮೃತ ಮಲ್ಲಣ್ಣ ಗೊತ್ತು. ಮಲ್ಲಣ್ಣ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಅಪಘಾತವು ಸುಮಾರು ವರ್ಷಗಳ ಹಿಂದೆ ಮುದಬಾಳ ತಿರುವಿನ ಬಳಿ ಆಗಿರುತ್ತದೆ. ಅಪಘಾತದ ದಿನದಂದು ನಾನು ಮದರಿ ಗ್ರಾಮದಿಂದ ಶಹಾಪೂರಕ್ಕೆ ಕ್ರೂಸರ್ ವಾಹನದಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ನಾನು ಕ್ರೂಸರ್ ವಾಹನದಲ್ಲಿದ್ದೆ. ಅಪಘಾತವು ಲಾರಿಯು ಮತ್ತು ಕ್ರೂಸರಿಗೆ ಗುದ್ದಿದ ಕಾರಣ ಆಗಿರುತ್ತದೆ. ಸದರಿ ವಾಹನಗಳ ನಂಬರ್ ಗೊತ್ತಿಲ್ಲ. ಸದರಿ ಲಾರಿ ಮತ್ತು ಕ್ರೂಸರ್ ವಾಹನ ನಂಬರ್ ಗೊತ್ತಿಲ್ಲ ಹಾಗೂ ಸದರಿ ಲಾರಿ ಮತ್ತು ಕ್ರೂಸರ್ ವಾಹನಗಳನ್ನು

ಯಾರು ಚಾಲನೆ ಮಾಡುತ್ತಿದ್ದರೆಂದು ಗೊತ್ತಿಲ್ಲ. ಅಪಘಾತವು ಯಾರ ತಪ್ಪಿನಿಂದ ಹಾಗೂ ಯಾರಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಕಣ್ಣು , ಹಣೆ , ಕಿವಿ, ಬಾಯಿಗೆ ಗಾಯವಾಗಿರುತ್ತದೆ. ನಾನು ಪೊಲೀಸರಿಗೆ ಅಪಘಾತ ಹೇಗೆ ಆಗಿರುತ್ತದೆ ಎಂದು ಹೇಳಿರುತ್ತೇನೆ. ಬೇರೆಯವರಿಗೆ ಏನು ಗಾಯಗಳಾಗಿರುತ್ತವೆಂದು ಗೊತ್ತಿಲ್ಲ.

ಸಾಕ್ಷಿಗೆ ನಿಪಿ–3 ಮತ್ತು 4 ರಲ್ಲಿರುವ ಕ್ರೂಸರ್ ವಾಹನವನ್ನು ನೋಡಿ ಗುರುತಿಸಿಲ್ಲ. ಸಾಕ್ಷಿಗೆ ಇನ್ನೆರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಲಾರಿ ವಾಹನವನ್ನು ನೋಡಿ ಗುರುತಿಸಿಲ್ಲ ಅಪಘಾತವಾದ ನಂತರ ಪೊಲೀಸರು ಅಪಘಾತವನ್ನು ಇವರೇ ಮಾಡಿರುತ್ತಾರೆಂದು ತೋರಿಸಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

ದಿನಾಂಕ 13–03–2015 ರಂದು ನಾನು ಮತ್ತು ಗೌರಮ್ಮ, ಮಲ್ಲಪ್ಪ, ಪ್ರಭು ಹಾಗೂ ನಮ್ಮ ಗ್ರಾಮದ ಮಲ್ಲಣ್ಣ ತಳವಾರ, ಮಲ್ಲಣ್ಣ ನಾಟೇಕಾರ್, ಮಲ್ಲೇಶಿ ನಾಟೇಕಾರ್, ಜಾನಪ್ಪ ಸುಬೇದಾರ, ಖಂಡಪ್ಪ ಖಡಬಾಳ, ಶರಣಪ್ಪ ಹಲಗಡ್ಲ, ಶರಣಪ್ಪ ಸುಬೇದಾರ ಎಲ್ಲರೂ ಕೂಡಿಕೊಂಡು ಕೆಎ–32 ಎಂ.–6243 ರಲ್ಲಿ ಸಗರ ಗ್ರಾಮಕ್ಕೆ ಹೋಗುತ್ತಿದ್ದೆವು ಎಂದರೆ ನಿಜ.

ಸದರಿ ಕ್ರೂಸರ್ ವಾಹನವನು 1 ನೇ ಆರೋಪಿ ಶಿವುಕುಮಾರ ತಂದೆ ಶಂಕರ್ ವಿಶ್ವಕರ್ಮ ನಡೆಸುತ್ತಿದ್ದ ಎಂದರೆ ಗೊತ್ತಿಲ್ಲ. ಅದೇ ದಿನ ಸಂಜೆ 06–30 ಗಂಟೆ ಸಮಯದಲ್ಲಿ ಮುದಬಾಳ ಕೆ ಗ್ರಾಮದ ತಿರುವು ಹತ್ತಿರ 2 ನೇ ಆರೋಪಿ ತನ್ನ ಲಾರಿ ನಂ.MH 38 D–0514 ನ್ನು ಅತಿವೇಗ, ನಿರ್ಲಕ್ಷತನ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಹಾಗೂ ನಮ್ಮ ಕ್ರೂಸರ್ ವಾಹನದ ಚಾಲಕ ಕೂಡ ವಾಹನವನ್ನು ಅತಿವೇಗ, ನಿರ್ಲಕ್ಷತನ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ ಕಾರಣ ದರಿ ಕ್ರೂಸರ್ ವಾಹನ ಲಾರಿಯ ಹಿಂಬದಿಗೆ ಹೋಗಿ ಡಿಕ್ಕಿಯಾಗುವಂತೆ ಮಾಡಿರುತ್ತಾರೆಂದೆ ನಿಜ. ಸದರಿ ಕ್ರೂಸರಿನಲ್ಲಿ ನನ್ನೊಂದಿಗೆ ಪ್ರಯಾಣಿಸುತ್ತಿದ್ದ ಮಲ್ಲಣ್ಣ ತಳವಾರ್ ರವರಿಗೆ ಅಪಘಾತದಲ್ಲಿ ತೀವ್ರಸ್ವರೂಪದ ಗಾಯಗಳಾಗಿ ಆತ ಮೃತಪಟ್ಟಿರುತ್ತಾನೆಂದರೆ ನಿಜ. ಸದರಿ ಅಪಘಾತದಲ್ಲಿ ಚಾಸಾ–10 ರಿಂದ 17 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆಂದರೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಚಾಸಾ–6 ರಿಂದ 8 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆಂದರೆ ಗೊತ್ತಿಲ್ಲ. ಅಪಘಾತವು ಎರಡೂ ವಾಹನಗಳ ಚಾಲಕರ ತಪ್ಪಿನಿಂದ

ಆಗಿರುತ್ತವೆಂದರೆ ಗೊತ್ತಿಲ್ಲ. ಲಾರಿ ಚಾಲಕ ಶೇಖ್ ಮೆಹತಾಬರರವರನ್ನು ಪೊಲೀಸರು ನನಗೆ ತೋರಿಸಿರುತ್ತಾರೆಂದರೆ ಗೊತ್ತಿಲ್ಲ. ಪೊಲೀಸರಿಗೆ ಹೇಳಿಕೆ ಹಾಗೂ 2 ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಮರು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೋಲಿಸರಿಗೆ ದಿನಾಂಕ 16-03-2015 ರಂದು ಈಗ ಓದಿ ಹೇಳಿದಂತೆ "ಇಂದು ತಾವು......................................... ......................................... ಅಂತಾ ಹೇಳಿದನು" ಅಂತಾ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಮರು ಹೇಳಿಕೆ ಭಾಗವನ್ನು ಅಲ್ಲಗಳೆದ ಕಾರಣ ಸಾಕ್ಷಿ ಮರುಹೇಳಿಕೆ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಅಪಘಾತದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್.ಬಿ.ವೈ. ಆರೋಪಿ ಪರ ವಕೀಲರಿಂದಃ**

ಈ ಪ್ರಕರಣದ ವಿಚಾಗಳು ಗೊತ್ತಿಲ್ಲ. ಪ್ರಕರಣದ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿಲ್ಲ. ನನ್ನ ಹೇಳಿಕೆಗಳಲ್ಲಿ ಬರೆದಂತಹ ವಿಚಾರಗಳು ಗೊತ್ತಿಲ್ಲ. ಅಪಘಾತವು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ಹೇಗೆ ಹಾಗೂ ಯಾರ ತಪ್ಪಿನಿಂದಾಗಿರುತ್ತದೆ ಎಂದು ಗೊತ್ತಿಲ್ಲ. 2 ನೇ ಆರೋಪಿಯನ್ನು ನಾನು ಅಪಘಾತದ ಸ್ಥಳದಲ್ಲಿ ನೋಡಿಲ್ಲ. 2 ನೇ ಆರೋಪಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ನೋಡಿಲ್ಲ. ಪೊಲೀಸರು ನನಗೆ ಯಾವುದೇ ವ್ಯಕ್ತಿಗಳನ್ನು ತೋರಿಸಿಲ್ಲ. 2 ನೇ ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ನಿಜ. ಅಪಘಾತವು ಕ್ರೂಸರ್ ವಾಹನದ ಚಾಲಕನ ತಪ್ಪಿನಿಂದಾಗಿರುತ್ತದೆ ಎಂದರೆ ನಿಜ.

ಮರುವಿಚಾರಣೆ ಏನೂ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹಿರಿಯ ಪ್ರ.ದ.ನ್ಯಾ. ದಂಡಾಧಿಕಾರಿಗಳು
ಜೇವರಗಿ.